ಬೈಂದೂರು ಕ್ಷೇತ್ರದಲ್ಲಿ ನ್ಯಾಯಬೆಲೆ ಅಂಗಡಿ ಮಂಜೂರಾತಿ

1650 (2133) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು) - ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ?

ಅ) ಬೈಂದೂರು ಕ್ಷೇತ್ರಕ್ಕೆ ಸೇರಿದ ಯಡ್ತರೆ ವ್ಯವಸಾಯ ಸೇವಾ ಸಹಕಾರ ಬ್ಯಾಂಕ್‌ನವರು ಶಿರೂರು ಬುಖಾರಿ ಕಾಲೋನಿಯಲ್ಲಿ ನ್ಯಾಯಬೆಲೆ ಅಂಗಡಿ ತೆರೆಯಲು ಅನುಮತಿ ಕೋರಿದಾಗ್ಯೂ ಸದರಿ ಸಹಕಾರ ಬ್ಯಾಂಕ್‌ಗೆ ಅನುಮತಿ ಕೊಡದೆ ಖಾಸಗಿಯವರಿಗೆ ಅನುಮತಿ ನೀಡಿರುವುದರ ಕಾರಣ ಏನು ;

ಆ) ಗ್ರಾಮ ಪಂಚಾಯತ್‌ನಿಂದ ಪರವಾನಗಿ ಪಡೆಯದೆ ನ್ಯಾಯ ಬೆಲೆ ಅಂಗಡಿ ತೆರೆಯಲು ಕಾನೂನಿನಲ್ಲಿ ಅವಕಾಶವಿದೆಯೇ ;

ಇ) ಸೇವಾ ಸಹಕಾರ ಬ್ಯಾಂಕ್ ಮೂಲಕ ನಡೆಸಲ್ಪಡುವ ನ್ಯಾಯ ಬೆಲೆ ಅಂಗಡಿಗಳು ಅವ್ಯವಹಾರ ನಡೆಸದಂತೆ ನೋಡಿಕೊಳ್ಳುವ ಜವಾಬ್ದಾರಿ ಆಡಳಿತ ಮಂಡಳಿಗೆ ಇದ್ದರೂ ಖಾಸಗಿಯವರಿಗೆ ಯಾರ ನಿಯಂತ್ರಣವಿರುತ್ತದೆ ?

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಶಿರೂರು ಬುಖಾರಿ ಕಾಲೋನಿಯಲ್ಲಿ ನ್ಯಾಯಬೆಲೆ ಅಂಗಡಿ ತೆರೆಯಲು ಖಾಸಗಿ ವ್ಯಕ್ತಿಗಳಿಗೆ ಅನುಮತಿ ನೀಡಿರುವುದಿಲ್ಲ.

ಆ) ಅಗತ್ಯ ವಸ್ತುಗಳ (ಸಾ.ವಿ.ಪ) ನಿಯಂತ್ರಣ ಆದೇಶ 1992ರ ಪ್ರಕಾರ ಗ್ರಾಮ ಪಂಚಾಯತ್‌ರವರಿಂದ ಪರವಾನಗಿ ಪಡೆಯಬೇಕಾದ ಅವಶ್ಯಕತೆ ಇರುವುದಿಲ್ಲ ಆದಾಗ್ಯೂ ನ್ಯಾಯಬೆಲೆ ಅಂಗಡಿಯ ಮಂಜೂರಾತಿಯ ಸಂದರ್ಭದಲ್ಲಿ ವಹಿವಾಟು ನಡೆಸುವ ಸ್ಥಳಕ್ಕೆ ಸಂಬಂಧಿಸಿದಂತೆ ದಾಖಲೆಯನ್ನು ಒದಗಿಸಬೇಕಾಗುತ್ತದೆ.

ಇ) ಖಾಸಗಿಯವರಿಂದ ಅಥವಾ ಸಹಕಾರ ಸಂಘಗಳಿಂದ ನಡೆಸಲ್ಪಡುವ ಎಲ್ಲಾ ನ್ಯಾಯಬೆಲೆ ಅಂಗಡಿಗಳು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ನಿಯಂತ್ರಣಕ್ಕೆ ಒಳಪಡುತ್ತವೆ.

ಬೀದರ್ ಜಿಲ್ಲೆಯಲ್ಲಿ ಬ್ಯಾರೇಜ್‌ಗಳ ನಿರ್ಮಾಣ ಕಾರ್ಯಯೋಜನೆ

1651 (2340) ಶ್ರೀ ಗುಂಡಪ್ಪ ವಕೀಲ್ (ಔರದ್) - ಮಾನ್ಯ ಜಲಸಂಪನ್ಮೂಲ ಸಚಿವರು ಈ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ?

ಅ) ಗೋದಾವರಿ ಬೆಸನ್‌ನಲ್ಲಿ ಬರುವ ಮಂಜ್ರಾ ನದಿಗೆ ಅಡ್ಡಲಾಗಿ ಬೀದರ್ ಜಿಲ್ಲೆಯಲ್ಲಿ ಬ್ಯಾರೇಜ್‌ಗಳ ನಿರ್ಮಾಣ ಕಾರ್ಯಯೋಜನೆ ಸರ್ಕಾರದ ಮುಂದಿದೆಯೇ ;

ಆ) ಈ ಯೋಜನೆಗಳ ವಿವರಗಳೇನು ಹಾಗೂ ಈ ವರ್ಷದ ಆಯವ್ಯಯದಲ್ಲಿ ಈ ಕಾಮಗಾರಿಗಳನ್ನು ಅಳವಡಿಸಲಾಗುತ್ತದೆಯೇ ?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು) :

ಅ) ಗೋದಾವರಿ ಕೊಳ್ಳದಲ್ಲಿ ಬರುವ ಮಾಂಜ್ರಾ ನದಿಗೆ ಅಡ್ಡಲಾಗಿ ಬ್ಯಾರೇಜುಗಳ ನಿರ್ಮಾಣದ ಪ್ರಸ್ತಾಪ ಸರ್ಕಾರದ ಮುಂದಿದೆ.

ಆ) ಮಾಂಜ್ರಾ ನದಿಯ ಮೇಲೆ ಒಟ್ಟು ನಾಲ್ಕು ಬ್ಯಾರೇಜುಗಳನ್ನು ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ. ಅವುಗಳ ವಿವರ ಕೆಳಗಿನಂತಿದೆ.